ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS
13

ಇಲಾಖೆ / ವಿಷಯ : DEPARTMENT / SUBJECT: ಕೃಷಿ ಕಾಯ್ದೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 11/1/21

**ಡೀಲ್** ಬೆಂಬಲ ಬೆಲೆ ಕ್ವಿಂಟಲ್‌ಗೆ ₹1868, ರಿಲಯನ್ಸ್ ಬೆಲೆ ₹1950

# ಕೃಷಿ ಕಾಯ್ದೆ: ಸಿಂಧನೂರಿನಲ್ಲಿ ರೈತರಿಂದ ರಿಲಯನ್ಸ್ ಭತ್ತ ಖರೀದಿ

**ಸ್ವಸ್ಥ್ಯ ರೈತ ಉತ್ಪಾದಕ ಕಂಪನಿಯಿಂದ 1000 ಕ್ವಿಂ.ಗೆ ಒಪ್ಪಂದ**

**• ಕನ್ನಡಪ್ರಭ ವಾರ್ತೆ** ರಾಯಚೂರು 11/1/21

ಕೇಂದ್ರ ಸರ್ಕಾರ ಬಹುಚರ್ಚಿತ ನೂತನ ಕೃಷಿ ತಿದ್ದುಪಡಿ ಕಾಯ್ದೆ, ಎಪಿಎಂಸಿ ಕಾಯ್ದೆ ಜಾರಿಗೆ ತಂದ ಬಳಿಕ ಇದೀಗ ರಿಲಯನ್ಸ್ ಕಂಪನಿ ಜಿಲ್ಲೆಯ ರೈತರಿಂದ ಸೋನಾಮಸೂರಿ ಭತ್ತವನ್ನು ನೇರವಾಗಿ ಖರೀದಿಸಲು ಮುಂದಾಗಿದೆ. ಮಾರುಕಟ್ಟೆಯಲ್ಲಿ ಭತ್ತದ ಬೆಲೆ ಕುಸಿತ, ಸರ್ಕಾರ ಬೆಂಬಲ ಬೆಲೆಗೆ ಭತ್ತ ಖರೀದಿ ಕೇಂದ್ರ ಆರಂಭಿಸಿರುವ ಬೆನ್ನಲ್ಲಿಯೇ ಈ ಬೆಳವಣಿಗೆಯಾಗಿದೆ.

ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಸ್ವಸ್ಥ್ಯ ರೈತ ಉತ್ಪಾದಕ ಕಂಪನಿಯು ರಿಲಯನ್ಸ್ ಜೊತೆ ಭತ್ತ ವ್ಯಾಪಾರಕ್ಕೆ ಒಪ್ಪಂದ ಮಾಡಿಕೊಂಡಿದೆ. ರೈತರು ನಿಗದಿ ಪಡಿಸಿರುವ ಮೊತ್ತ ಪಾವತಿಸಿ ತಮ್ಮ ಹೆಸರನ್ನು ಆನ್‌ಲೈನ್‌ನಲ್ಲಿ ನೋಂದಾಯಿಸಿ ನಿಗದಿ ಪಡಿಸಿರುವ ನಿಯಮಗಳಂತೆ ಭತ್ತ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. ಸದ್ಯ ಒಂದು ಸಾವಿರ ಕ್ವಿಂಟಲ್ ಭತ್ತ ಮಾರಾಟಕ್ಕಾಗಿ ರಿಲಯನ್ಸ್ ಮಾರ್ಟ್‌ನಿಂದ ಅನುಮತಿ ಪಡೆದುಕೊಂಡಿದ್ದು, ಮುಂದಿನ ದಿನಗಳಲ್ಲಿ ಬೇಡಿಕೆ ಅನುಸಾರ ಖರೀದಿ ನಡೆಯಲಿದೆ. ಮಾರುಕಟ್ಟೆಯಲ್ಲಿ ಭತ್ತದ ಬೆಲೆ ಕಡಿಮೆಯಾಗಿರುವುದರಿಂದ ಪ್ರತಿ ಕ್ವಿಂಟಲ್‌ಗೆ ಸರ್ಕಾರ ₹1868 ಬೆಂಬಲ ಬೆಲೆ ನೀಡಿ ಖರೀದಿಸುತ್ತಿದೆ. ಈ ಕಂಪನಿಯು ಕ್ವಿಂಟಲ್‌ಗೆ ₹1950 ನೀಡಿ ಭತ್ತ ಖರೀದಿಸಲು ಮುಂದಾಗಿದೆ. ಹೀಗಾಗಿ ರೈತರಿಗೆ ಕ್ವಿಂಟಲ್‌ಗೆ ₹82 ಅಧಿಕ ದರ ದೊರೆಯಲಿದೆ.

ಮೊದಲ ರೈತರು ಒಂದು ಸಾವಿರ ನೀಡಿ ಹೆಸರನ್ನು ನೋಂದಾಯಿಸಿದರೆ, ಕಂಪನಿಯಿಂದ ಮೂರನೇ ತಂಡವು ಸ್ಯಾಂಪಲ್ ಪರೀಕ್ಷೆಗೆ ಬರುತ್ತದೆ.

ಭತ್ತದ ಬೆಳೆ ಶೇ.16ಕ್ಕಿಂತಲೂ ಕಡಿಮೆ ತೇವಾಂಶದಿಂದ ಕೂಡಿದ್ದರೆ ಕೂಡಲೇ ಯಾವುದೇ ಮಿತಿಯಿಲ್ಲದೇ ಭತ್ತ ಖರೀದಿಸಲಿದೆ. ಮಾರಾಟವಾದ ಬತ್ತ ವೇ-ಬ್ರೀಜ್‌ನಲ್ಲಿ ತೂಕ ಮಾಡಿಸುತ್ತಿದ್ದಂತೆಯೇ ರೈತರ ಖಾತೆಗೆ ಹಣ ಜಮೆಯಾಗಲಿದೆ. ಭತ್ತವನ್ನು ಲಾರಿಯಲ್ಲಿ ಲೋಡ್ ಮಾಡುವುದರಿಂದ ಹಿಡಿದು ತೂಕ, ಖರೀದಿ ಮತ್ತು ಅನ್‌ಲೋಡಿಂಗ್ ಹೀಗೆ ಇಡೀ ಪ್ರಕ್ರಿಯೆಯು ಜಿಪಿಆರ್‌ಎಸ್ ವ್ಯವಸ್ಥೆಯಡಿ ನಡೆಯಲಿದೆ.